# ಗೋವಿಂದದಾಸರು

Contributed by Sri Pranesh Hejjib, www.vijayadasaru.net Team member

೧

ಶ್ರೀ ಗಣನಾಥನಿಗೆ । ಶಾರದಾಂಬಿಕೆಗೆ
ಶ್ರೀ ಗೌರಿ ಭೂದೇವಿ ಶ್ರೀದೇವಿಗೆ ।
ಶ್ರೀ ಗುರು ಮಹಾವಿಷ್ಣು ಬ್ರಹ್ಮರುದ್ರಾದ್ಯರಿಗೆ
ಸಿರಿಚರಣ ಪಂಕಜಗೆ ನಮಿಸಿ ನುತಿಸುವೆನು ೧
ಅಷ್ಟ ದಿಕ್ಪಾಲರಿಗೆ ಶಿಷ್ಯಮರುದ್ಗಣಗಳಿಗೆ
ಅಷ್ಟವಸು ಸಪ್ತಋಷಿ ನವಗ್ರಹಾದ್ಯರಿಗೆ ।
ಶ್ರೇಷ್ಠ ಹನುಮಂತನಿಗೆ ಕನಕಾದಿ ದಾಸರಿಗೆ
ಸೃಷ್ಟಿಯೊಳು ಕವಿಜನಕೆ ಕೈಮುಗಿವೆನು ೨
ವಿಪ್ರಕುಲ ಸಂಜಾತ ಮಯ್ಯೂರ ಮಡಿಪುರದೊ–
ಳಿಪ್ಪ ವೆಂಕಟರಾಯ ಗೋಳೇರ ಸುಕುಮಾರ ।
ಸರ್ಪಶಯನನ ದಾಸ ಗೋವಿಂದನೆಂಬವನು
ಜಲ್ಪಿಸಿಯೆ ವಿರಚಿಸಿದೆನೀ ಕೃತಿಯನು ೩
ಯತಿಗಣ ಪ್ರಾಸ ವಿಷಮಾಕ್ಷರಗಳೊಂದರಿಯೆ
ಕೃತ ದೋಷ ರಾಗ ಲಯ ಭೇದವನು ತಿಳಿಯೆ ।
ಪೃಥುವಿಯೊಳು ಕವಿಗಳಂತಗ್ಗಳನು ನಾನಲ್ಲ
ಅತಿಶಯದ ನ್ಯೂನತೆಯ ಬಲ್ಲ ಶ್ರೀನಲ್ಲ ೪
ತಪ್ಪು ಸಾವಿರವಿರಲು ತಿದ್ದಿ ಬಲ್ಲವರಿದನು

ಒಪ್ಪುವಂದದಿ ಜಗದಿ । ಮೆರೆಸಿ ವಾಚಕರು
ಸರ್ಪಶಯನನ ಕೃಪೆಗೆ ಪಾತ್ರರಾಗುತ ನೀವು
ಕ್ಷಿಪ್ರದಲಿ ಗೋವಿಂದದಾಸನನು ಪರಸಿ ಮನ್ನಿಪುದು ॥

೨

ಶ್ರೀಹರಿ ಲಕ್ಷ್ಮಿಯರು

ಅಂಗಳದೊಳಗಾಡೋ ರಂಗ ಪ॒ರ
ಹೆಂಗಳ ಮನೆಗ್ಹೋಗ ಬ್ಯಾಡೋ ನೀಲಾಂಗ ಪ
ದಧಿ ಘೃತ ಚೋರನೆನ್ನುವರು ನಿನ್ನ
ಬೆದರಿಸಿ ಜರೆವರು ಪದುಮನೇತ್ರೆಯರು
ವಿಧವಿಧದಲಿ ಬಾಧಿಸುವರು ಕೊರಳ
ಪದಕದ ಸರವನ್ನು ಸೆಳೆದುಕೊಳ್ಳುವರು ೧
ಕಿರುಕುಳ ....ನಿನ್ನ ಮನ
ಕರಕರಿಸುವದೆನಗಿನಿತು ಕೇಳಣ್ಣ
ಕರುಗಳ ಬಿಡ ಹೇಳಿ ಮುನ್ನಾ ಬಲು
ಹಗರಣ ಗೈಯ್ಯುವರೆನ್ನಾ ಸಂಪನ್ನಾ ೨
ನುಡಿಯ ಲಾಲಿಸು ಮುದ್ದು ಕಂದಾ ನಿನ-
ಗಿಡುವೆನಕ್ಷತೆ ವಸ್ತ್ರಾಭರಣ ಸುಗಂಧಾ
ಕೊಡುವೆನು ದಧಿ ಘೃತದಿಂದಾ ಕ್ಯಾದ
ಕಡಬು ಕಜ್ಜಾಯ ಅತಿರಸವಾ ಗೋವಿಂದಾ ೩

**2**

ಕರವ ಮುಗಿವೆ ಕಮಲನಯನ

ಕರುಣದಿಂದಲಿ ಪಾಲಿಸೊ

ಕರಿವರದ ಶ್ರೀ ಕಮಲನಾಭ

ಕರೆದು ಎನ್ನನು ಮನ್ನಿಸೊ ೧

ಸ್ಮರಿಸಲರಿಯೇ ಸಿರಿಯ ರಮಣ

ಪರಮಪಾವನ ಪಾದವಾ

ಸ್ಮರನ ಜನಕ ಶರಧಿ ಶಯನ

ಇರಿಸು ಎನ್ನೊಳು ಮೋಹವಾ ೨

ಬಂಧು ಬಳಗ ಭಾಗ್ಯ ಭೋಗ್ಯ-

ದಿಂದ ಸುಖವ ಕಾಣೆನೇ

ದಂದಶೋಕ ಶಮನನೇ ಗೋವಿಂದ

ದಾಸನ ಪ್ರಾಣನೇ ೩

**3**

´ರಸ್ವತಿಸ್ತುತಿ

ಪಾಹಿ ಸರಸ್ವತೇ ಪಾಲಿಸೆನ್ನ ಮಾತೆ ಪ

ಪಾಹಿ ಲೋಕದಾತೇ ಪಾಹಿ ಶೋಕಘಾತೆ

ಪಾಹಿ ಧರ್ಮ ಪ್ರೀತೆ । ಪಾಹಿ ಕರ್ಮರಹಿತೆ ೧

ಪಂಕಜೌಘಕೋಟಿ । ಸಂಕಾಶೆ ಪದ್ಮಾಕ್ಷಿ

ಕಿಂಕರನ್ನ ರಕ್ಷಿಸಂಕದಿ ನಿರೀಕ್ಷಿಸಿ ೨

ಕುಂದಸಮರದನೇ ಮಂದಗಜಗಮನೇ

ಚಂದದಿ ಗೋವಿಂದ । ದಾಸನೊಂದ್ಯಚರಣೆ ೩

**5**

ಬಾರೋ ಮನೆಗೆ ಮಾಧವಾ । ದೇವರ ದೇವ ।

ಬಾರೋ ಮನೆಗೆ ಮಾಧವಾ ಪ

ಬಾರೋ ಮನೆಗೆ ದಯಾ । ತೋರೋ ಎನಗೆ ಜೀಯಾ ।

ವಾರಿಜನಯನಾ ಓ । ಕ್ಷೀರಾಬ್ಧಿ ಶಯನನೇ ॥ಬಾರೋ॥ ೧

ವೇದ ಗೋಚರ ನಿನ್ನಾ । ಪಾದ  ನಂಬಿದ ಎನ್ನಾ ।

ಆದರಿಸೈ ಕರುಣೋದಯ ಮೂರುತೀ ॥ಬಾರೋ॥ ೨

ಸಿಂಧುವಸನದೀಶಾ । ಸುಂದರಾಂಗ ವಿಲಾಸ ।

ಇಂದಿರೆಯರಸ ಗೋ । ವಿಂದದಾಸನ ನಂದಾ ॥ಬಾರೋ॥ ೩

**6**

ಶಿವ ಶಂಬೋ ಶಂಕರಾ । ಶಿವ ಸೋಮಶೇಖರಾ ।

ಶಿವನೆ ಗಂಗಾಧರ । ಶಿವ ಗೌರೀವರ ।

ಶಿವ ಚರ್ಮಾಂಬರ । ಶಿವ ಭವ  ಭಯಹರ ೧

ಶಿವ ನೀಲಕಂಧರಾ । ಶಿವಕಾಲಾ ಸಂಹರಾ ।

ಶಿವನೇ ಜಟಾಧರ । ಶಿವ ರಜತೇಶ್ವರ ।

ಶಿವ ಶೂಲಾಧರ । ಶಿವನಿಗೆ ಶಿರ ಸರ ೨

ಶಿವ ಭಸ್ಮಾಲೇಪನಾ । ಶಿವ ವೃಷಭ  ವಾಹನಾ ।

ಶಿವ ಫಣಿಭೂಷಣ ಶಿವಗೆ ತ್ರಿಲೋಚನ ।

ಶಿವ ಗೋವಿಂದನ । ಶಿವ ದಾಸರ ಪ್ರಿಯಾ ೩

**7**

ಶ್ರೀ ವಿಠಲ ಹೃಷಿಕೇಶನೆ ನತಜನ

ಪೋಷ ವಾಸುಕೀಶಯನ ಪ

ವಾಸವನುತ ರಜಿತೇಶ ನಮಿತಪದ

ಕ್ಲೇಶಹರಣ ಜಗದೀಶ ಜನಾರ್ದನ ಅ.ಪ

ನೀರೊಳಿಳಿದು ಮತ್ಸ್ಯಾವತಾರದಿಂದಲಿ

ನಲಿದು ಘೋರ ತಮನ ಗೆಲಿದು

ಚಾರುವೇದವ ತಂದೆ ಧೀರ ಕಮಠನಾದಿ

ಕೇಸರಿಯಾಕಾರವನೇ ತಾಳಿ

ಸಾರಿ ಕಂಬದಿ ಮೈದೋರುತ ತರಳಗೆ

ಧೀರನ ಸೀಳಿದೆ ನಾರ ಮೃಗೇಶನೆ ೧

ಬಲಿಯೊಳ್ ದಾನವ ಬೇಡಿ ನೆಲನ ಈರಡಿ ಮಾಡಿ

ಛಲದಿ ಬಂಧಿಸಿ ಬಲಿಯ ತಲೆಯ ಮೆಟ್ಟಿದೆ ವಾಮನಾ

ಛಲದ ಭಾರ್ಗವ ರಾಮ ಧರಣಿಜೆಗೊಲಿದನೆ

ರಘುರಾಮ ಕೊಳಲನುಡಿಸಿ ಗೋವುಗಳೊಡನಾಡಿದೆ

ನಳಿನನಯನ ಶ್ರೀಕೃಷ್ಣ ಮುರಾಂತಕ ೨

ತ್ರಿಪುರನ ಸತಿಯರ ವ್ರತವ ಪರಿಹರಿಸಿದ

ಕಪಟ ಮೋಹನ ರೂಪ ನಿಪುಣಾ ಬೌದ್ಧಾವತಾರ

ಕಪಟದೀ ಹಯವೇರಿ ಬಂದಾ ನಿಪುಣ

ಕಲ್ಕ್ಯಾವತಾರೀ ಗುಪಿತದಿ ಸರ್ವಾ ವ್ಯಾಪಕನೆನಿಸಿದೆ

ಕಪಟನಾಟಕ ಗೋವಿಂದದಾಸನ ಪ್ರಿಯಾ ೩

## 8

ಶಂಭೋ ಶಿವ ಶಂಕರಾ । ಮಹೇಶ್ವರ ॥

ಶಂಭೋ । ಶಿವ ಶಂಕ'ರ ಪ

ಶಂಭು ಮಹೇಶ್ವರ । ಅಂಬಾಮನೋಹರ

ನಂಬಿದವರ ಕಾಯ್ವ । ಸಾಂಬ ದಿಗಂಬರ ೧

ನೀಲಕಂಧರ ವರ । ಬಾಲಚಂದಿರಧರ ॥

ಫಾಲಲೋಚನ ರುಂಡ । ಮಾಲಾಕಾಲನಕಾಲ ॥

ಅಂಧಕಾಸುರ ಹರ । ಮಂದಾಕಿನಿಧರ ॥

ನಂದಿ ಸವಾರ ಗೋ । ವಿಂದ ದಾಸವಂದ್ಯ ೩

**9**

ವಿಠ್ಠಲನಾಮ ಸ್ಮರಣೆಯನನುದಿನ

ಬಿಟ್ಟಿರಲಾಗದು ಮನವೇ ಪ

ದುಷ್ಟ ವಚನವನು ಜಿಹ್ವೆಯೊಳೆಂದಿಗು

ಪಠಿಸಲು ಬೇಡವೋ ಮನವೇ ಅ.ಪ

ಧಾರುಣಿಯೊಳು ನರ ಶರೀರದಿ ಬಂದು

ಕ್ರೂರ ಕೃತ್ಯಗಳ ಮಾಡದಿರು

ಘೋರ ಪಾಪಿ ಅಜಾಮಿಳನನು ಕಾಯ್ದಾ

ನಾರಾಯಣನನು ಮರೆಯದಿರೂ ೧

ತಿಳಿದು ತಿಳಿದು ನೀ ಮರುಳನಾಗದಿರು

ಕಲಿ ಸಂಸಾರದಿ ಸುಖವಿಲ್ಲಾ

ಹಳುವದಿ ಧ್ರುವನಿಗೆ ಒಲಿದ ಮಹಾತ್ಮನ

ಸ್ಮರಿಸೈ ಕುಶಲದ ಮಾತಲ್ಲಾ ೨

ಕಾಲನ ಬಾಧೆಗೆ ಸಿಲುಕುವ ಕಾರ್ಯವ

ಮೇಲು ಉಲ್ಲಾಸದಿಂದೆಸಗದಿರೂ

ಬಾಲ ಪ್ರಹ್ಲಾದನ ಪಾಲ ನರಸಿಂಹನ

ಲೀಲೆಯೊಳಾದರು ಮರೆಯದಿರೂ ೩

ದುಃಖ ಸಂತೋಷಕೆ ಹಿಗ್ಗದೆ ಕುಗ್ಗದೆ

ರಕ್ಕಸ ವೈರಿಯ ಧೇನಿಪರೆ

ದುಃಖಿಸೆ ದ್ರೌಪದಿ ಸೆರಗಿಗಕ್ಷಯವಿತ್ತ

ರುಕ್ಮಿಣಿಯರಸನು ಪೊರೆವ ಖರೆ ೪

ವ್ರತನಿಷ್ಠೆಗಳೆಂಬ ನೇಮವಿದ್ಯಾತಕೊ

ವ್ಯಥೆಯೊಂದೆದೆಯೊಳಗಿರುತಿರಲು

ರತಿಪತಿಪಿತ ಗೋವಿಂದನ ಧ್ಯಾನದಿ

ನುತಿಸಲು ಸುಲಭ ಸಾಯುಜ್ಯಗಳೂ ೫

**10**

ಬಾ ಬಾ ಬಾ ಬಾರೋ ಕೃಷ್ಣ

ಬಾರೋ ಮುಖವ ತೋರೋ ಪ

ಬಾರೋ ಮುಖವ ತೋರೋ

ಸರಸಾಮೃತ ಬೀರೋ ಬಾ ಬಾ ಬಾ ೧

ಸಾ ಸಾ ಸಾ ಸಾಕೋ ನಿನಗೀ

ಲೋಕಮಾಯ ಮೋಹನಾ ।

ಲೋಕಮಾಯ ಮೋಹನಾ ।

ಶೋಕನೇಕ ನಾಶನಾ ೨

ಕೋ ಕೋ ಕೋ ಕೊಡಿಸೊ

ನಮ್ಮ ಉಡುವ ಶೀರೆಕುಪ್ಪಸಾ ।

ಉಡುವ ಶೀರೆ ಕುಪ್ಪಸಾ ।

ಮಡದಿಯರಿಗೆ ಒಪ್ಪಿಸಾ ೩

ಅಲ್ಲ ಲ್ಲ ಲ್ಲ ಲ್ಲದಿದನೆಲ್ಲ

ಗೋಪಿವಲ್ಲಭನೊಳ್ । ಎಲ್ಲ

ಗೋಪಿ ವಲ್ಲಭನೊಳ್ ।

ಸೊಲ್ಲಿಸುವೆವು ನಿಲ್ಲದೇ ೪

ನಂದಂದನ ನಂದ ಗೋಪಿ ।

ಕಂದನೇ ಮುಕುಂದನೆ ।

ಕಂದನೇ ಮುಕುಂದನೇ ।

ಸುಂದರಾ ಗೋವಿಂದನೇ ೫

**11**

ಮಂಗಳ ಜಯಜಯತೂ ಜಯತು ಜಯ

ಮಂಗಳ ಶುಭ ಜಯತು ಪ

ವಾರಿಜೋದ್ಭವನಿಗೆ ವಾಣಿ ಶಾರದೆಗೆ

ನಾರಾಯಣನಿಗೆ ನಾರಿ ಲಕ್ಷುಮೀಗೆ

ಮಾರ ಸಂಹಾರನಿಗೆ ಪಾರ್ವತೀ ದೇವಿಗೆ

ನಾರೀ ರನ್ನೆಯರ್ ಹೂವಿನಾರತಿ ಬೆಳಗೆ ೧

ಸೃಷ್ಟಿಕರ್ತಗೆ ಸರ್ವ ಅಕ್ಷರದಾಯಿನಿಗೆ

ರಕ್ಷಣ ಮೂರ್ತಿಗೆ ಅಕ್ಷಯಾಶ್ರಿತೆಗೆ

ಶಿಕ್ಷೆ ರಕ್ಷಃ ದೇವಿ ಸೃಷ್ಟಿ ಸಂಹಾರಗೆ

ಅಕ್ಷತೆಯಿಟ್ಟು ಸ್ತ್ರೀಯರ್ ಆರತಿ ಬೆಳಗೆ ೨

ವರಹಂಸ ಗಮನಗೆ ಮಯೂರ ವಾಹನಗೆ

ಗರುಡ ಗಮನಗೆ ಮದಕರಿ ಧ್ವಜೆಗೆ

ವೃಷಭವಾಹನನಿಗೆ ವರಸಿಂಹ ವಾಹಿನಿಗೆ

ಸರಸಿಜಾಕ್ಷಿಯರ್ ಮುತ್ತಿನಾರತಿ ಬೆಳಗೆ ೩

ಕಮಂಡಲುಧಾರಿಗೆ ವರವೀಣಾಪಾಣಿಗೆ

ಕೌಮೋದಕಿಧರಗೆ ಕಮಲ  ಸುಮಕರಗೆ

ಡಮರು ತ್ರಿಶೂಲಧರಗೆ ತೋಮರ ಪಾಣಿಗೆ

ಕೋಮಲಾಂಗಿಯರ್ ಕುಂಕುಮದಾರತಿ ಬೆಳಗೆ ೪

ಅಂಬುಜಾಸನಗೆ ಶುಂಭ  ಸಂಹಾರಳಿಗೆ

ಕುಂಭ  ಕರ್ಣಾಂತಕಗೆ ಮಹಿಷಮರ್ದಿನಿಗೆ

ಸಂಭ್ರಮ  ತ್ರಿಪುರಾರಿ ಚಂಡ ಮುಂಡಾರ್ದಿನಿಗೆ

ಅಂಬುಜಾಕ್ಷಿಯರ್ ಸಂಭ್ರಮದಾರತಿ ಬೆಳಗೆ ೫

ಚಂದದಿ ಬ್ರಹ್ಮಗೆ ಚಂದಿರವದನೆಗೆ

ಸುಂದರ ಮೂರ್ತಿಗೆ ಇಂದಿರೆಗೆ

ಅಂದದ ಶಿವನಿಗೆ ಅರವಿಂದನೇತ್ರೆಗೆ

ವಂದಿಸಿ ಗೋವಿಂದದಾಸನಾರತಿ ಬೆಳಗೆ ೬